**OS. No. 15/2009**
**DW-2**

**ದಿನಾಂಕ: 01-12-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲು : ಶ್ರೀ ಎಸ್.ಕೆ.ಪಿ ನ್ಯಾಯವಾದಿಗಳಿಂದ.**

ಪ್ರತಿವಾದಿ-26 ನನ್ನ ತಮ್ಮ. ಪ್ರತಿವಾದಿ-27 ನನ್ನ ಹೆಂಡತಿ . ಪ್ರತಿವಾದಿ-6 ನನ್ನ ಸೋದರ ಅತ್ತೆ . ಪ್ರತಿವಾದಿ-7 , ಪ್ರತಿವಾದಿ-6 ರವರ ಮಗ ಎಂದರೆ ಸರಿ . ಪ್ರತಿವಾದಿ-7 ರವರಿಗೆ ನನ್ನ ತಂಗಿಯನ್ನು ಕೊಟ್ಟು ಮದುವೆ ಮಾಡಿರುತ್ತೇವೆ ಎಂದರೆ ಸರಿ . ನಾನು ಸರ್ವೆ ನಂ. 1128/2 , ಸರ್ವೆ ನಂ. 1128/3, ಸರ್ವೆ ನಂ. 1106/1 ಮತ್ತು ಸರ್ವೆ ನಂ. 1106/2 , ಗಳನ್ನು ನನ್ನ ಹೆಂಡತಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತೇನೆ. ಸರ್ವೆ ನಂ. 1128/2 ಮತ್ತು ಸರ್ವೆ ನಂ. 1128/3 ಇವು ದಾವಾ ಆಸ್ತಿಗಳಲ್ಲ ಎಂದರೆ ಸರಿ . ಸದರಿ ಜಮೀನುಗಳನ್ನು ನಾನು ಹನುಮಂತಪ್ಪ ತಂದೆ ಸೋಮಯ್ಯ ಇವರ ಕಡೆಯಿಂದ ಖರೀದ ಮಾಡಿರುತ್ತೇನೆ. ಸದರಿ ಜಮೀನುಗಳು ಹನುಮಂತಪ್ಪ ತಂದೆ ಸೋಮಯ್ಯ ಇವರಿಗೆ ಹೇಗೆ ಬಂದವು ಎಂದರೆ ಅವು ಸೋಮಯ್ಯನ ಆಸ್ತಿಗಳು ಅಂತ ಸಾಕ್ಷಿ ಹೇಳುತ್ತಾರೆ. ಸೋಮಯ್ಯ ಎಂದರೆ ಶೇಷಪ್ಪನ ಮಗ ಎಂದರೆ ಸರಿ . ಸದರಿ ಜಮೀನು ಹನುಮಂತಪ್ಪ ತಂದೆ ಸೋಮಯ್ಯನ ಸ್ವಂತ ಆಸ್ತಿಗಳು ಅಲ್ಲ , ಅವು ಜಂಟಿ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳ ಸೋಮಯ್ಯನಿಂದ ಹನುಮಂತನಿಗೆ ಬಂದಿರುತ್ತವೆ ಅಂತ ಸಾಕ್ಷಿ ಹೇಳುತ್ತಾರೆ. ಸದರಿ ಆಸ್ತಿಗಳು ಸೋಮಯ್ಯನಿಗೆ ಶೇಷಪ್ಪನಿಂದ ಬಂದಿರುತ್ತವೆ. ಶೇಷಪ್ಪನಿಗೆ ಸದರಿ ಆಸ್ತಿಗಳು ಹೇಗೆ ಬಂದವು ಎಂದರೆ ಗೊತ್ತಿಲ್ಲ. ಸದರಿ ಜಮೀನುಗಳು ಶೇಷಪ್ಪನ ಸ್ವಂತ ಆಸ್ತಿಗಳು ಅಲ್ಲ, ಶೇಷಪ್ಪನಿಗೆ ಅವರ ತಂದೆಯಿಂದ ಮತ್ತು ತಾತನಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ಅಂದರೆ ಸದರಿ ಜಮೀನುಗಳು ಶೇಷಪ್ಪನ ಸ್ವಂತ ಆಸ್ತಿಗಳೇ ಎಂದರೆ , ಇರಬಹುದು ನನಗೆ ಗೊತ್ತಿಲ್ಲ ಅಂತ ಸಾಕ್ಷಿ ಹೇಳುತ್ತಾರೆ. ಹನುಮಂತಪ್ಪನಿಗೆ ಮೂರು ಜನ ಅಕ್ಕತಂಗಿಯರು ಅವರೆಂದರೆ ಬೀಸಮ್ಮ , ಹುಸೇನಮ್ಮ ಹಾಗೂ ಸವರಮ್ಮ (ಪ್ರತಿವಾದಿ-20 ರಿಂದ 22). ಅವರು ಮೂರು ಜನ ಈಗ ತೀರಿಕೊಂಡಿರುತ್ತಾರೆ. ಪ್ರತಿವಾದಿ-20 ರಿಂದ 22 ರವರ ವಾರಸುದಾರರು ಈ ದಾವೆಯಲ್ಲಿ ಸೇರ್ಪಡೆಯಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹನುಮಂತಪ್ಪನ ಹೆಂಡತಿ ಹೆಸರು ಗಂಗಮ್ಮ. ಅವರಿಗೆ ಐದು ಜನ ಮಕ್ಕಳು

ಅವರುಗಳೆಂದರೆ ಲಕ್ಷ್ಮೀ, ಸ್ವಾಮಿ, ತಾಯಮ್ಮ , ನಾಗೇಶ ಮತ್ತು ಬೀಸಮ್ಮ ಇರುತ್ತಾರೆ. ನಾನು ಖರೀದಿ ಮಾಡಿದ ಆಸ್ತಿಗಳ ಖರೀದಿಪತ್ರಕ್ಕೆ ಹನುಮಂತಪ್ಪನ ಹೆಂಡತಿ ಮಕ್ಕಳ ಒಪ್ಪಿಗೆ ಪಡೆದಿರುವುದಿಲ್ಲ , ಅವರು ರಾಜಿಯಾಗಿರುತ್ತಾರೆ ಅಂತ ಸಾಕ್ಷಿ ಹೇಳುತ್ತಾರೆ. ರಾಜಿ ಎಂದರೆ ಓಎಸ. 178/2009 (ಹೊಸ ನಂಬರ ಓಸ ನಂ. 159/2017) ರಲ್ಲಿ ರಾಜಿ ಆಗಿರುತ್ತೇವೆ. ರಾಜಿ ಆದ ಆಸ್ತಿಗಳು ಎಂದರೆ ನಾನು ಖರೀದಿ ಮಾಡಿದ ಜಮೀನುಗಳು ಇರುತ್ತವೆ. ಸದರಿ ದಾವೆಯ ರಾಜಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಡಿ-25 ಮತ್ತು 26 ರಲ್ಲಿ ನಾನು ಖರೀದಿ ಮಾಡಿದ ಜಮೀನುಗಳು ಎಲ್ಲಾ ಇರುವುದಿಲ್ಲ ಎಂದರೆ ಸರ್ವೆ ನಂ. 1128/2 ಹಾಗೂ ಸರ್ವೆ ನಂ. 1128/3 ಇರುವುದಿಲ್ಲ ಅಂತ ಸಾಕ್ಷಿ ಹೇಳುತ್ತಾರೆ. ನಾವು ರಾಜಿಯಾದ ಆಸ್ತಿಗಳು ಈಗ ದಾವಾ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಜಮೀನುಗಳು ನಿಡಿ-25 ಮತ್ತ 26 ರಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಸದರಿ ಜಮೀನುಗಳನ್ನು ಮೋಸದಿಂದ ಖರೀದಿ ಮಾಡಿದ್ದೇನೆ ಅಂತ ಹನುಮಂತಪ್ಪ ನನ್ನ ವಿರುದ್ಧ ದೂರು ಕೊಟ್ಟಿದ್ದಾರೆ ಎಂದರೆ ಸರಿ , ಸದರಿ ದೂರಿಗೆ ಬಿ-ರಿಪೋರ್ಟ ಸಲ್ಲಿಸಿದ್ದಾರೆ ಅಂತ ಸಾಕ್ಷಿ ಹೇಳುತ್ತಾರೆ. ನಿಪಿ-523 ಮತ್ತು 525 ರ ಪ್ರಕಾರ ಖಾಸಗಿ ದೂರುಗಳನ್ನು ನ್ಯಾಯಾಲಯವು ಠಾಣೆಗೆ ರೆಫರ್ ಮಾಡಿತ್ತು ಎಂದರೆ ಸರಿ. ಸದರಿ ವ್ಯಾಜ್ಯ ಸಿವಿಲ್ ವ್ಯಾಜ್ಯ ಆಗಿದ್ದು , ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಅಂತ ವರದಿ ಸಲ್ಲಿಸಿದ್ದಾರೆ ಎಂದರೆ , ಬಿ-ರಿಪೋರ್ಟ ಸಲ್ಲಿಸಿದ್ದಾರೆ ಅಂತ ಸಾಕ್ಷಿ ಹೇಳುತ್ತಾರೆ. ನಾನು ಖರೀದಿ ಮಾಡಿದ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಆಗಿದ್ದರಿಂದ ಅವುಗಳಲ್ಲಿ ವಾದಿಯರಿಗೂ ಸಹ ಭಾಗ ಇದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಹನುಮಂತಪ್ಪನ ಅಕ್ಕತಂಗಿಯರು ಸಹ ಒಪ್ಪಿಗೆ ಕೈಪಿಯತ ಸಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ -20 ರಿಂದ 22 ರವರು ವಾದಿಯರ ದಾವೆಯನ್ನು ಡಿಕ್ರಿ ಮಾಡುವಂತೆ ಒಪ್ಪಿಗೆ ಕೈಪಿಯತ ಸಲ್ಲಿಸಿದ್ದಾರೆ ಎಂದರೆ ಅವರ ವಕೀಲರು ಸಲ್ಲಿಸಿದ್ದಾರೆ ಅಂತ ಸಾಕ್ಷಿ ಹೇಳುತ್ತಾರೆ. ಪ್ರತಿವಾದಿ-20 ರಿಂದ 22 ರವರಿಗೆ ಮೊದಲು ಶ್ರಿ ಉಸಮಾನ ಅಲಿ ವಕೀಲರು ಇದ್ದು , ಅವರು ತೀರಿಕೊಂಡಿರುತ್ತಾರೆ ಅವರ ನಂತರ ಶ್ರೀ ನೂರ್ ಮಹಮದ ವಕೀಲರು ಹಾಜರಾಗಿದ್ದು , ಈಗ ಶ್ರೀ ಆಂಜನೇಯ ವಕೀಲರು ಇರುತ್ತಾರೆ. ಶ್ರೀ ಆಂಜನೇಯ ವಕೀಲರು ಪ್ರತಿವಾದಿ-20 ರಿಂದ 22 ರವರಗೆ ಯಾವುದೇ ವಕಾಲತ್ ಸಲ್ಲಿಸಿಲ್ಲ ಎಂದರೆ ಸರಿಯಲ್ಲ . ತಹಶೀಲ್ ಕಛೇರಿಯಲ್ಲಿ ಹಾಕಿದ್ದಾರೆ ಅಂತ ಸಾಕ್ಷಿ ಹೇಳುತ್ತಾರೆ. ನಾನು ಖರೀದಿ ಮಾಡಿದ ಆಸ್ತಿಗಳು ವಾದಿಗಳಿಗೆ ಸಂಬಂಧಿಸಿದ ಆಸ್ತಿಗಳು ಆಗಿದ್ದು , ಅವು ಹನುಮಂತಪ್ಪನ ಸಂಪೂರ್ಣ ವೈಯಕ್ತಿಕ ಆಸ್ತಿಗಳು ಅಲ್ಲ ಎಂದರೆ

ಸರಿಯಲ್ಲ. ನಾನು ಮತ್ತು ನನ್ನ ಭಾವಮೈದ ಪ್ರತಿವಾದಿ-7 ಕೂಡಿಕೊಂಡು ಸದರಿ ಖರೀದಿ ಪತ್ರಗಳನ್ನು ಖೊಟ್ಟಿಯಾಗಿ ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ಜಂಟಿ ಕುಟುಂಬದ ಆಸ್ತಿಗಳನ್ನು ವಾದಿಯರಿಗೆ ಕೊಡಬಾರದು ಎಂಬ ಉದ್ದೇಶದಿಂದ ಸದರಿ ಖರೀದಿಪತ್ರಳನ್ನು ಖೊಟ್ಟಿಯಾಗಿ ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ವಾದಿಯರ ಮತ್ತು ಪ್ರತಿವಾದಿ-1 ರಿಂದ 22 ರವರ ಕುಟುಂಬದ ಸದಸ್ಯ ಅಲ್ಲ ಎಂದರೆ ಸರಿ . ವಾದಿಯರಿಗೆ ಮತ್ತು ಪ್ರತಿವಾದಿ-1 ರಿಂದ 22 ಆಸ್ತಿ ಸಿಗಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲು : ಎನ್ .ಎಂ ನ್ಯಾಯವಾದಿಗಳಿಂದ.</u>**

ನ್ಯಾಯವಾದಿಗಳು ಹಾಜರಿದ್ದು, ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ನ್ಯಾಯಹಿತದೃಷ್ಟಿಯಿಂದ ಪಾಟಿ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ವ.ಕೇ.ಸರಿ ಅದೆ.

2 ನೇ ಹೆಚ್ಚುವರಿ ಹಿರಿಯ ನ್ಯಾಯಾಧೀಶರು,
ರಾಯಚೂರು..